ಆದರೆ, ಬದುಕು ಬಂದಂತೆ ಸ್ವೀಕರಿಸುವ ದೊಡ್ಡ ಅಹಂಕಾರವಿದೆ' ಎಂದಳು ಅಷ್ಟೇ ನಿರ್ವಿಕಾರದಿಂದ. ಸಂದೀಪ ನಕ್ಕು ಕೈಯಿಂದ ನಿನ್ನ ಹಣೆಬರಹ ಎಂದು ಹಣೆ ಗೀಚಿ ಹೊರಟಿದ್ದ.

★★★

ಮುತ್ತಿನ ಬಾಸಿಂಗದ ಹಿಂದಿನಿಂದ ಬಗ್ಗಿ ನೋಡಿದಳು. ಬೆಂಕಿ ಮೇಲೆ ಕೂತಂತೆ ಮದುಮಗ ಸಂದೀಪ ಕೂತಿದ್ದ. ಮೆಲ್ಲಗೆ ಪಿಸುಗುಟ್ಟಿದಳು, 'ಹಣೆ, ಮುತ್ತಿನ ಬಾಸಿಂಗ ಕಟ್ಟಿಸಿಕೊಂಡಿದೆ, ಆದ್ರಿಂದ ಬರಹನೂ ಬದಲಾದೀತು'. ಥಟ್ಟಂತ ನುಗ್ಗಿ ಬಂತು ಸಂದೀಪನ ಮಾತು, 'ನಿನ್ನ ತಲೆ, ಈ ಬಾಸಿಂಗವನ್ನು ಈ ಪ್ರೋಗ್ರಾಂ ಮುಗ್ದ ಕೂಡ್ಲೆ ಮನೆಯ ಬೋದಿಗೆಯ ಕಂಬಕ್ಕೆ ಕಟ್ಟಿ ಹಾಕ್ತಾರೆ. ಬಾಸಿಂಗ ಆಗ ನಗ್ತಾ ಇರುತ್ತೆ, ನೋಡು ಹೇಗೆ ನಿನ್ನನ್ನು ಕಟ್ಟಿ ಹಾಕಿದೆ ಅಂತ. ಅದರಂತೆ ನಮ್ಮ ಜೀವನವೂ ನೇತಾಡಿಕೊಂಡಿರುತ್ತೆ ನೋಡು. ಕಂಬದ ಮೇಲೆ ಈ ಬಾಸಿಂಗದ ಹಾಗೆ ದೂಳು ಹಿಡಿಸಿಕೊಂಡು ನಾವೂ ಇರುವಾ. ಆದ್ರೆ ಅದೇನಿದ್ರೂ ನಿನ್ನದೇ ಆಯ್ಕೆ ಮಾರಾಯ್ತಿ' ಕೇತಕಿ ಮೌನವಾದಳು. ಬಯಸಿ ಬಯಸಿ ಸಮಸ್ಯೆನಾ ಮೈಮೇಲೆ ಎಳ್ಕೊಂಡೆನೋ ಹೇಗೆ? ಯೋಚಿಸುತ್ತಾ ಇದ್ದಂತೆ ಮದುವೆಯ ವಿಧಿಗಳು ಮುಗಿದು ಸಂದೀಪ ಪಾಟಣಕರನ ಪತ್ನಿಯಾಗಿ ಅವನ ಮನೆ ಸೇರಿದಳು.

ಮದುವೆಯ ನಿಜವಾದ ಸಂಭ್ರಮ ಕಾಣುತ್ತಿದ್ದುದು ಸಂದೀಪನ ಆಯಿಯ ಮುಖದಲ್ಲಿ. ಸೊಸೆಯ ಕೈಹಿಡಿದು, ಸುತ್ತ ಯಾರೂ ಇಲ್ಲವೆಂದು ಖಾತ್ರಿ ಪಡಿಸಿಕೊಂಡು, 'ಕೇತಕಿ, ಗಾಬ್ರಿಯಾಗಬೇಡ. ಅವ್ನು ಹಾಗೆನೇ. ಮನಸ್ಸಿ ಸ್ವಲ್ಪ. ಆದ್ರೆ ಮನಸ್ಸು ಒಳ್ಳೆದು. ಹೊಂದಿಕೊಂಡು ಹೋದ್ರೆ ಅಂಥ ತೊಂದರೆಯಾಗದು. ಮಾತು ಕಡಿಮೆ ಅಷ್ಟೇ' ಎಂದು ಅವರ ಕೈಯಲ್ಲಿದ್ದ ಎರಡು ಚಿನ್ನದ ಪಾಟ್ಲಿ ಬಳೆಗಳನ್ನು ಕೇತಕಿಯ ಕೈಗೆ ತೊಡಿಸಿದರು. ಶೋಭನದಂಥ ಯಾವುದೇ ಕಾರ್ಯಕ್ರಮಗಳು ಮೊದಲೇ ಬೇಡವೆಂದಿದ್ದ. ರಾತ್ರಿ ರೂಮಿಗೆ ಬಂದವಳಿಗೆ ಸಂದೀಪ ನಗುತ್ತಾ ಸ್ವಾಗತಿಸಿದ. 'ಬಾ, ಇದು ನಮ್ಮ ಅಫಿಶಿಯಲ್ ರೂಮು' ಎನ್ನುತ್ತಾ, 'ಹಾಗೇ ಬಾಗಿಲು ಹಾಕಬಹುದು, ಹಾಕದೇನೂ ಇರಬಹುದು. ಹೋಗ್ಲಿಬಿಡು ಹಾಕಿ ಬಿಡ್ತೇನೆ. ಆಯಿ ಮತ್ತೆ ಬಾವಿಗೆ ಹಾರ್ತಿನಿ ಅಂತ ನಾಟಕ ಮಾಡಿದ್ರೆ' ಎಂದ ನಾಟಕೀಯವಾಗಿ. ಕೈಗಳ ಬಳೆಗಳನ್ನು ನೋಡಿ, ನಗುತ್ತಾ, 'ಓಹೋ! ಆಯಿಯ ಬೆಣ್ಣೆನಾ' ಎಂದ. ಕೇತಕಿಯ ಕಣ್ಣು ಕಿರಿದಾಗಿದ್ದನ್ನು ನೋಡಿ, 'ತಾವು ಕೂತ್ಕೊಬಹುದು, ಮಂಚದ ಮೇಲೆ' ಎಂದ. ಮತ್ತೆ ಗಂಭೀರವಾಗಿ, 'ಕೇತಕಿ, ಇದೇ ಈ ಡ್ರಾಮಾಗಳು ನಂಗಾಗಲ್ಲ. ಮದ್ವೆ, ಗಂಡ ಹೆಂಡತಿ ಅಂದ್ರೆ ಹೀಗೆ ಇರ್ಬೇಕು. ಶೋಭನ ಅದು ಇದು ಇದೆಲ್ಲ ಏನು ಮಾರಾಯ್ತಿ. ಇಬ್ಬರು ಮೆಚ್ಯುರ್ಡ್ ಮನುಷ್ಯರು ಒಟ್ಟಿಗೆ ಇರ್ಬೇಕೂಂತ ಮಾಡಿದ್ರೆ ಮುಗೀತು, ಅಷ್ಟೇ. ಅದ್ಕೆ ಊರೊಳಗಿನ ಎಲ್ಲರ ಮುಂದೆ ಮೈಕ್ ಇಟ್ಟು ಹೇಳ್ಬೇಕಾ ಇವತ್ತಿಂದ ಇಬ್ರೂ ಒಟ್ಟಿಗೆ ಮಲ್ಕೋತಾರೆ ಅಂತ' ಹಣೆ ಚಚ್ಚಿಕೊಂಡ.

'ವರುಷದೊಳಗೆ ಮಗುವಾಗಬೇಕು. ಒಂಥರಾ ಟೈಮ್ ಟೇಬಲ್ ಹಾಕ್ಕೊಂಡು ಬದ್ಕೊದು. ಇದನ್ನೆಲ್ಲಾ ಯಾರು ಡಿಸೈಡ್ ಮಾಡಿದ್ರು ಕೇತಕಿ. ನಮ್ಮ ಬದುಕನ್ನ ಯಾಕೆ ಬೇರೆಯವ್ರು ಡಿಸೈಡ್ ಮಾಡ್ಬೇಕು. ನಂಗಿದೆಲ್ಲ ತುಂಬಾ ಸುಸ್ತು ಮಾಡೋ ವಿಷ್ಯಗಳು' ಎನ್ನುತ್ತಿದ್ದವನ ಮುಖದ ಹತಾಶೆ ನೋಡಿ ಕೇತಕಿ, 'ಖಂಡಿತ ಯಾವ ಟೈಮ್ ಟೇಬಲ್ಲೂ ಬೇಕಿಲ್ಲ. ನಾನು ಯಾವತ್ತೂ ಟೈಮ್ ಟೇಬಲ್ ಹಾಕಿ ಬದುಕೇ ಇಲ್ಲ. ಹಾಗೆಂದ ತಕ್ಷಣ ಟೈಮ್ ಟೇಬಲ್ ಪ್ರಕಾರ ಬದುಕೋದು ಕೂಡಾ ಅಷ್ಟೊಂದು ಕೆಟ್ಟ ಐಡಿಯಾ ಏನಲ್ಲ. ಆ ರೀತಿ ಬದುಕುತ್ತಿರೋರ ಜೀವನವೇನೂ ಕೆಟ್ಟು ಹೋಗಿಲ್ಲ. ಇದರಲ್ಲಿ ಏನಂಥ ತೊಂದ್ರೆ ಇದೆ ಸಂದೀಪ್, ಇಡೀ ಪ್ರಪಂಚಕ್ಕೆ ಇರೋ ವ್ಯವಸ್ಥೆ ಇದು' ಎಂದವಳ ಮಾತಿನಿಂದ ಗಾಬರಿಗೊಂಡವನಂತೆ, 'ಕುಟುಂಬದ ಪೊಸೆಸ್ಸಿವ್‌ನೆಸ್ ಉಸಿರು ಕಟ್ಟಿಸುತ್ತೆ ಕೇತಕಿ. ಮಗ ಅನ್ನುವ ಪ್ರೀತಿ ಇರಲಿ, ಆದ್ರೆ ನನ್ನ ಹತ್ತಿರನೇ ಇರಬೇಕು, ನಾನು ಹೇಳಿದಂತೇ ಇರಬೇಕು ಅನ್ನೋದು